**ಅಸಲು ದಾವ ಸಂಖ್ಯೆ: 400/2018**

**ಡಿ.ಡಬ್ಲೂ -1**

**ದಿ:12-06-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು ವಾದಿಪರ ವಕೀಲರಾದ ಶ್ರೀ ಎಮ್ ಟಿ ಎಚ್ ರವರಿಂದ:-**

1. ದಾವಾ ಆಸ್ತಿಯು ನಮ್ಮ ಆಸ್ತಿಗೆ ತಾಗಿಕೊಂಡು ಇರುತ್ತದೆ ಎಂದರೆ ಸರಿ. ಹಾಗಾಗಿ ದಾವಾ ಆಸ್ತಿಯ ಮೇಲೆ ನಮ್ಮ ತಂದೆಯವರಿಗೆ ಆಸಕ್ತಿ ಇತ್ತು ಎಂದರೆ ಸರಿ. ದಾವಾ ಆಸ್ತಿಯ ಕುರಿತು ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿರುವಾಗಲೇ ನನ್ನ ತಂದೆ ವಾದಿಯರ ಜೊತೆ ಖರೀದಿಯ ಮಾತುಕತೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರ ಕುರಿತು ನನ್ನ ತಂದೆ ಹಾಗೂ ವಾದಿಯರ ನಡುವೆ ಏನು ಮಾತುಕತೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಕುರಿತು ಅವರಿಬ್ಬರ ನಡುವೆ 7,80,000/- ಗೆ ದಾವಾ ಆಸ್ತಿ ಖರೀದಿಸುವ ಕುರಿತು ಮಾತುಕತೆ ಆಗಿರುತ್ತದೆ. ಸದರಿ ಖರೀದಿಯ ಕುರಿತು ಮಾತುಕತೆ ಎಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಮಾತುಕತೆ ಯಾವ ದಿನ ಹಾಗೂ ಯಾವ ಸಮಯಕ್ಕೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ-3 ರ ದಿ: 20-02-1997 ರ ಖರೀದಿ ಕರಾರು ಪತ್ರದಲ್ಲಿ ಪ್ರತಿ ಗುಂಟೆಗೆ 1,95,000/- ರೂ.ಗಳಂತೆ ನಮೂದು ಮಾಡಲಾಗಿದೆ ಎಂದರೆ ಸರಿ. ನಿಪಿ-3 ರಲ್ಲಿ ನಮೂದಿಸಿರುವ ಸ್ವತ್ತಿನಲ್ಲಿ ಸುಮಾರು 5 ಗುಂಟೆಯಷ್ಟು ಅನ್ಯಸಂಕ್ರಮಣಗೊಂಡ ಪ್ಲಾಟಗಳು ಇರುತ್ತವೆ ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ಪ್ಲಾಟಗಳನ್ನು ಸಿಟಿ ಸರ್ವೆಯರ್ ಮುಖಾಂತರ ಅಳತೆ ಕಾರ್ಯ ಮಾಡಿಸಬೇಕೆಂದು ಕರಾರು ಆಗಿರುತ್ತದೆ ಎಂದರೆ ಸರಿ. ಸಿಟಿ ಸರ್ವೆಯರ್ ರವರಿಗೆ ಅರ್ಜಿ ನೀಡಿ ಸದರಿ ಅಳತೆ ಕಾರ್ಯ ಮಾಡಿಸಿದ್ದರಾ ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ಮತ್ತೊಂದು ನಿಭಂದನೆ ಇದ್ದು ಅದರಂತೆ ಸದರಿ ಆಸ್ತಿಗೆ ಸಂಬಂಧಪಟ್ಟ ದಾವೆಗಳೆಲ್ಲ ಮುಕ್ತಾಯಗೊಂಡ ನಂತರ ಖರೀದಿ ಪತ್ರ ಆಗಬೇಕೆಂಬ ಶರತ್ತು ಇತ್ತು ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ರ ಕರಾರ ಪತ್ರ ಎಲ್ಲಿ ತಯಾರು ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಬಾಂಡನ್ನು ನನ್ನ ತಂದೆ ಖರೀದಿಸಿದ್ದರು.

ನಿಪಿ-3 ರ ಕರಾರು ಪತ್ರ ತಯಾರು ಮಾಡಲು ಮಾಹಿತಿಯನ್ನು ವಾದಿಯರು ಎಂದರೆ ಆಸ್ತಿಯನ್ನು ಖರೀದಿಗೆ ಕೊಡುವವರು ನೀಡಿದ್ದರು. ನಿಪಿ-3 ರ ಕರಾರು ಪತ್ರದಲ್ಲಿ ಸಾಕ್ಷಿದಾರರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ದಿಃ 20-02-1997 ರಂದು ನನ್ನ ತಂದೆಯವರು ವಾದಿಯರಿಗೆ 1,00,000/- ಹಣ ನೀಡಿದ್ದರು.

2. ದಿಃ 15-03-1997 ರಂದು ಮತ್ತೊಂದುನ ಕರಾರು ಪತ್ರ ಆಗಿದ್ದು ಏಕೆ ಎಂದರೆ ಸಾಕ್ಷಿ ಖರೀದಿಗೆ ಕೊಡುವವರ ಸಹೋದರಿಯರಿಗೆ 50,000/- ಹಣ ಕೊಡಬೇಕೆಂದು ಮಾತುಕತೆ ಆದ ಕಾರಣ ಸದರಿ ಕರಾರು ಪತ್ರ ಮಾಡಲಾಯಿತು ಎಂದು ನುಡಿಯುತ್ತಾರೆ. ದಿಃ 20-02-1997 ರ ಕರಾರು ಪತ್ರದಲ್ಲಾಗಲೀ ಅಥವಾ ದಿಃ 15-03-1997 ರ ಕರಾರು ಪತ್ರದಲ್ಲಾಗಲೀ ಖರೀದಿಯ ಮೊತ್ತವನ್ನು 7,80,000/- ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. 1,95,000/- ರೂ.ಗಳಿಗೆ ಒಂದು ಗುಂಟೆ ಎಂದಾದರೇ 5 ಗುಂಟೆ ಜಾಗಕ್ಕೆ 9,75,000/- ರೂ.ಗಳು ಆಗುತ್ತದೆ ಎಂದರೆ ಸಾಕ್ಷಿ ಜಾಗವನ್ನು ಅಳತೆ ಮಾಡಿದಾಗ ಅದು ಕಡಿಮೆ ಇತ್ತು ಆದ್ದರಿಂದ ಮೊದಲ ಕರಾರು ಪತ್ರದ ಶರತ್ತಿನಂತೆ ಜಾಗವನ್ನು ಅಳತೆ ಮಾಡಿದಾಗ 4 ಗುಂಟೆ ಎಂದು ಬಂದಿರುತ್ತದೆ ಎಂದು ನುಡಿಯುತ್ತಾರೆ. ಮೂರನೇ ಕರಾರು ಪತ್ರವಾದ ದಿಃ 20-01-1998 ರ ಕರಾರು ಪತ್ರದಲ್ಲಿ ಸದರಿ ಜಾಗ 4 ಗುಂಟೆ ಅಳತೆಯ ನಂತರ ಬಂದಿರುತ್ತದೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿ. ನಾವು ಆ ರೀತಿ ಅಳತೆ ಕಾರ್ಯ ಮಾಡಿರುವುದೇ ಇಲ್ಲ ಎಂದರೆ ಸರಿಯಲ್ಲ. ಸದರಿ ಮೂರು ಕರಾರು ಪತ್ರಗಳಲ್ಲಿ 5 ಗುಂಟೆ ಇದ್ದ ಜಮೀನು 4 ಗುಂಟೆ ಹೇಗಾಯಿತು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಡಿ-11 ರ ಕರಾರು ಪತ್ರ ಯಾರ ಕೈಬರಹದಲ್ಲಿ ಇರುತ್ತದೆ ಹಾಗೂ ಎಲ್ಲಿ ತಯಾರು ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಡಿ-11 ರ ದಾಖಲೆ ಬರೆಯಲು ಯಾರು ಮಾಹಿತಿ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ.

3. ನನ್ನ ಲಿಖಿತ ಹೇಳಿಕೆಯಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದ ಖರೀದಿ ವ್ಯವಹಾರದ ಮಾತುಕತೆಯ ಮೊದಲ ದಿನದಿಂದಲೂ ಖರೀದಿ ಪತ್ರ ಆಗುವ ದಿನದವರೆಗೂ ನಾನು ಹಾಜರಿದ್ದೆ ಎಂದು ಬರೆದಿರುತ್ತೇನೆ ಎಂದರೆ ಸರಿ. ಮೂರೂ ಕರಾರು ಪತ್ರಗಳಿಗೆ ಸಂಬಂಧಿಸಿದ ಬಾಂಡ್ ಪತ್ರಗಳನ್ನು ಇನಾಮದಾರ ರವರು ಖರೀದಿಸಿರುತ್ತಾರೆ. ಮೂರೂ ಕರಾರು ಪತ್ರಗಳು ಎಲ್ಲಿ ತಯಾರಾದವು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಮೂರೂ ಬಾಂಡ್ ಪತ್ರಗಳಲ್ಲಿ ಪ್ರತಿ ಪುಟಕ್ಕೆ ಸಹಿಗಳು ಇರುವುದಿಲ್ಲ ಎಂದರೆ ಸರಿ. ನಿಡಿ-11 ರ ಕರಾರು ಪತ್ರದಲ್ಲಿ ಎಲ್ಲಿಯೂ ಸಹ ನನ್ನ ತಂದೆಯ ಸಹಿ ಇರುವುದಿಲ್ಲ ಎಂದರೆ ಸರಿ. ಸದರಿ ದಿವಸ ನನ್ನ ತಂದೆ ಹಣವನ್ನು ಕೊಟ್ಟಿದ್ದರೆ ಅವರ ಸಹಿ ಅದರ ಮೇಲೆ ಇರಬೇಕಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಹಣ ಪಡೆದವರು ಸಹಿ ಮಾಡಬೇಕಿತ್ತು ಎಂದು ನುಡಿಯುತ್ತಾರೆ. ನಿಡಿ-11 ರಲ್ಲಿ ನನ್ನ ತಂದೆ ಒಟ್ಟು 7,80,000/- ಹಣವನ್ನು ಕೊಡುವುದು ಇದ್ದು ಅದರಲ್ಲಿ 4,64,000/- ಹಣವನ್ನು ಕೊಟ್ಟಿದ್ದು ಬಾಕಿಯ 3,16,000/- ಹಣವನ್ನು ಕೊಡುವುದು ಬಾಕಿ ಇರುತ್ತದೆ ಎಂಬ ನಮೂದನ್ನು ನಮ್ಮ ತಂದೆ ಹಾಗೂ ನಾನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-11 ರಲ್ಲಿ ನಮೂದಾಗಿರುವ ಯಾವುದೇ ಹಣ ಬ್ಯಾಂಕನ ಮುಖಾಂತರ ಎಂದರೆ ಚೆಕ್, ಡಿಡಿ ಅಥವಾ ಬ್ಯಾಂಕ ಖಾತೆ ವರ್ಗಾವಣೆ ಮುಖಾಂತರ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಗದು ರೂಪದಲ್ಲಿ ಹಣ ಪಾವತಿ ಮಾಡಿರುವುದಾಗಿ ನುಡಿಯುತ್ತಾರೆ. ಖರೀದಿಯ ಕರಾರಿನಂತೆ ಗುಂಟೆಗೆ 1,95,000/- ರೂ.ಗಳಂತೆ ಒಟ್ಟು 9,75,000/- ರೂ.ಗಳನ್ನು ನಾವು ಕರಾರಿನಂತೆ ಕೊಡಬೇಕಿತ್ತು ಎಂದರೆ ಸರಿಯಲ್ಲ. ನಿಡಿ-11 ರ ಪ್ರಕಾರ ನಾವು ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಹಾಗೂ ವಾದಿಯರಿಗೆ ತಿಳಿಯದಂತೆ ಅದನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

4. ನಾನು ವಾದಿಯರ ಸಹೋದರಿಯರಿಗೆ ಬರೆದುಕೊಟ್ಟಿರುವ ಮೂಲ ಅಧಿಕಾರ ಪತ್ರ ಎಂದರೆ ಜಿಪಿಎ ನ್ನು ನಿಡಿ-6 ರಂತೆ ಹಾಜರಪಡಿಸಿರುತ್ತೇನೆ ಎಂದರೆ ಸರಿ. ನಿಡಿ-6 ರ ಜಿಪಿಎ ಎಲ್ಲಿ ಹಾಗೂ

ಯಾರು ತಯಾರಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಜಿಪಿಎ ನೊಂದಣಿ ಆಗಿರುವುದಿಲ್ಲ ಎಂದರೆ ಸರಿ. ವಾದಿಯರ ಸಹೋದರಿಯರು ಆ ರೀತಿ ಯಾವುದೇ ಜಿಪಿಎ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರ ಸಹೋದರಿಯರಿಗೆ ಆ ರೀತಿ ಅಧಿಕಾರ ಪತ್ರ ಬರೆದುಕೊಟ್ಟಿರುವುದೇ ಇಲ್ಲ ಎಂದರೆ ಸರಿಯಲ್ಲ. ಸದರಿ ಜಿಪಿಎ ಯಾವ ನೋಟರಿ ಎದುರು ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಡಿ-1(ಎ), ನಿಡಿ-2 ರಿಂದ ನಿಡಿ-5 ರಶೀದಿಗಳಲ್ಲಿ ಇರುವ ಸಹಿಗಳು ವಾದಿಯರ ಸಹೋದರಿಯರ ಸಹಿಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-1(ಎ), ನಿಡಿ-2 ರಿಂದ ನಿಡಿ-5 ಹಾಗೂ ನಿಡಿ-6 ರ ದಾಖಲೆಗಳನ್ನು ನನ್ನ ತಂದೆಯವರು ಸೃಷ್ಟಿಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಒಂದೇ ದಿನ ಒಂದೇ ಬೆರಳಚ್ಚು ಮಶೀನನಿಂದ ಒಂದೇ ಸಮಯಕ್ಕೆ ತಯಾರು ಮಾಡಲಾಗಿದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಅದನ್ನು ಅವರೇ ತಯಾರು ಮಾಡಿಕೊಂಡು ಬಂದಿದ್ದರು. ಸದರಿ ದಾಖಲೆಗಳಲ್ಲಿ ಬರವಣಿಗೆ ಒಂದೇ ರೀತಿ ಇರುತ್ತದೆ ಎಂದರೆ ಸರಿ. ಸದರಿ ದಾಖಲೆಗಳು ಹಸ್ತಾಕ್ಷರದಲ್ಲಿ ಇರುವುದಿಲ್ಲ ಎಂದರೆ ಸರಿ. ಸದರಿ ದಾಖಲೆಗಳು ನಮ್ಮ ವಕೀಲರ ಕಚೇರಿಯಲ್ಲಿ ತಯಾರಾಗಿರುತ್ತವೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**